

# ಹೆಮ್ಮೆಯಿಂದ ಹೇಳಿ ಗೃಹಿಣಿ ಎಂದು

**ಕೃತಿಕಾ ರವೀಂದ್ರ**
**ಝೀ ಕನ್ನಡ 'ಭೂಮಿಗೆ ಬಂದ ಭಗವಂತ'ದ ಗಿರಿಜಾ**

■ ರಾಘವೇಂದ್ರ ಕೆ.

◆ **ನಿಮ್ಮ ಪರಿಚಯ ಹೇಳಿ.**

ಮೂಲತಃ ಶಿವಮೊಗ್ಗ ಜಿಲ್ಲೆಯ ಸಾಗರದವಳು. ಈಗ ಬೆಂಗಳೂರಿನಲ್ಲಿ ನೆಲೆ ನಿಂತಿದ್ದೇನೆ. ಸಿನಿಮಾ – ಸೀರಿಯಲ್‌ಗಳ ನಟನೆಯಲ್ಲಿ ಬದುಕು ಸಾಗಿದೆ. 2007ರಲ್ಲಿ 'ಜಂಬಾ' ಧಾರಾವಾಹಿಯಲ್ಲಿ ಬಾಲನಟಿಯಾಗಿ ಬಣ್ಣವನ್ನು ಹಚ್ಚಿದೆ. ಅದನ್ನು ಅಶೋಕ್ ಕಶ್ಯಪ್ ನಿರ್ದೇಶನ ಮಾಡಿದ್ದರು. ಅದಾದ ಕೂಡಲೇ 'ಪತ್ರೆ ಲವ್ಸ್ ಪದ್ಮ' ಸಿನಿಮಾ ಮಾಡಿದೆ. ನಂತರ 'ಮನೆ ಮಗಳು', 'ರಾಧಾ ಕಲ್ಯಾಣ' ಮಾಡಿದೆ. ನಂತರ 'ಬಿಗ್ ಬಾಸ್'ನಲ್ಲೂ ಸ್ಪರ್ಧಿ ಆಗಿದ್ದೆ.

◆ **ರೀಮೇಕ್ ಧಾರಾವಾಹಿಯಲ್ಲಿ ನಟರಿಗೆ ಎದುರಾಗುವ ಸವಾಲುಗಳೇನು?**

ರೀಮೇಕ್ ಅಂದರೆ ಹಿಂದೆ ಆ ಒಂದು ಪಾತ್ರವನ್ನು ಬೇರೆಯವರು ನಿರ್ವಹಿಸಿರುತ್ತಾರೆ. ಆ ಕಥೆಗೆ ಆ ಪಾತ್ರವನ್ನು ಅವರು ಸೆಟ್ ಮಾಡಿರುತ್ತಾರೆ. ಅವರ ದೇಹಭಾಷೆ, ಆಂಗಿಕ ಅಭಿನಯ ಎಲ್ಲ ಸರಿಯಾಗುತ್ತದೆ. ಅದು ಆ ಭಾಷೆ ಮತ್ತು ಆ ನೆಲಕ್ಕೂ ಹೊಂದಿಕೆಯಾಗುತ್ತದೆ. ಅದು ಮತ್ತೊಂದು ನೆಲಕ್ಕೆ ಹೊಂದಿಕೆ ಆಗುತ್ತದೆಯೇ ಎನ್ನುವುದನ್ನು ಹೇಳಲು ಆಗುವುದಿಲ್ಲ. ಹಾಗಾಗಿ ಅದನ್ನು ನೋಡದೇ ಇರುವುದು ಅನುಕೂಲ. ನಮ್ಮದೇ ಛಾಪನ್ನು ಮೂಡಿಸುವುದು ಅತ್ಯುತ್ತಮ ಮಾರ್ಗ ಎಂದು ಅಂದುಕೊಂಡಿದ್ದೇನೆ. ಪ್ರತಿ ಭಾಷೆಯ ರೀತಿ ನೀತಿಯೇ ಭಿನ್ನ. ಅದಕ್ಕೆ ತಕ್ಕಂತೆ ವೀಕ್ಷಕರು ಕೂಡ ತಮ್ಮತನಕ್ಕೆ ಹೊಂದಿಸಿಕೊಳ್ಳುತ್ತಾರೆ. ಹಾಗೆಯೇ ನಮ್ಮ ಸಮಾಜ ಬೇರೆ. ನಾವು ಬೆಳೆದು ಬಂದ ಬಗೆಯೂ ಭಿನ್ನ. ಹಾಗಾಗಿ ನಮಗೆ ಹೇಗೆ ಬೇಕೋ ಹಾಗೆ ರೂಢಿಸಿಕೊಂಡರೆ ಸಾಕು. ಹಳೆಯ ಮಾದರಿಯನ್ನು ಕಾಪಿ ಮಾಡಲು ಹೋದರೆ ತೊಂದರೆ ಆಗುತ್ತದೆ.

◆ **ಗಿರಿಜಾ ಪಾತ್ರದ ಮಹತ್ವವನ್ನು ಹೇಳುವುದಾದರೆ.**

ಗಿರಿಜಾ ಪಾತ್ರಕ್ಕೆ ನಾನು ಆರಂಭದಲ್ಲಿ ತುಂಬ ಶ್ರಮಿಸಿದ್ದೇನೆ. ಆ ಪಾತ್ರವನ್ನು ನನಗೆ ಹೊಂದಿಸಿಕೊಳ್ಳಬೇಕಿತ್ತು. ಹಾಗಾಗಿ ಅದರ ಮೇಲೆ ಕೆಲಸ ಮಾಡುವ ಅಗತ್ಯ ಇತ್ತು. ಒಂದು ಕಂತಿನಲ್ಲಿ ನಾಲ್ಕು ಸೀನ್ ಇದ್ದರೆ ನಾಲ್ಕೂ ಸೀನ್ ಭಿನ್ನವಾಗಿವೆ. ಒಂದರಲ್ಲಿ ಕಾಮಿಡಿ ಇದ್ದರೆ ಮತ್ತೊಂದರಲ್ಲಿ ಕರುಣೆಯ ಸನ್ನಿವೇಶ ಇರುತ್ತದೆ. ಒಂದೇ ಶೇಡ್‌ನಲ್ಲಿ ಪಾತ್ರ ಹೋಗುವುದಿಲ್ಲ. ಒಂದೇ ಕಂತಿನಲ್ಲಿ ಹಲವು ಭಾವಾಭಿವ್ಯಕ್ತಿಯನ್ನು ಬಯಸುವ ಪಾತ್ರ. ಆರಂಭದಲ್ಲಿ ಇದು ನನಗೆ ಸವಾಲಾಗಿತ್ತು ಕೂಡ. ನಾನು ಇದರಲ್ಲಿ ಎರಡು ಮಕ್ಕಳ ತಾಯಿ. ಬೇಗ ಈ ಪಾತ್ರಕ್ಕೆ ಹೊಂದಿಕೊಂಡೆ. ಇದಕ್ಕೆ ಸಹಾಯ ಆಗಿದ್ದು, ನನ್ನ ಮಕ್ಕಳ ಪಾತ್ರಧಾರಿಗಳು. ನಿತ್ಯ ಸೆಟ್‌ನಲ್ಲಿ ಅಮ್ಮ ಅಮ್ಮ ಎಂದೇ ಕರೆಯುತ್ತಾರೆ. ಅದು ಕೂಡ ಹೊಂದಿಕೆಯಾಗಲು ಅನುಕೂಲವಾಯಿತು. ಹಿರಿಯ ಕಲಾವಿದರಾದ ನವೀನ್, ಉಮೇಶ್ ಅವರ ಎದುರು ನಟಿಸಲು ಸಣ್ಣ ಅಳುಕು ಇತ್ತು. ನಾನು ಇದಕ್ಕೆ ಸೂಕ್ತ ಆಗುತ್ತೇನಾ ಎಂದು ಪ್ರಶ್ನಿಸಿಕೊಂಡಿದ್ದೂ ಇದೆ. ಅವರು ನನ್ನ ಅಭಿನಯವನ್ನು ಪ್ರಶಂಸಿಸಿ ಪ್ರೋತ್ಸಾಹಿಸುತ್ತಾರೆ. ಗೃಹಿಣಿಯ ಕೆಲಸ ಸುಲಭ ಅಲ್ಲ. ತುಂಬ ಜನ ಗೃಹಿಣಿ ಅನ್ನುವುದನ್ನು ತುಂಬ ಹಿಂಜರಿಕೆಯಿಂದ ಹೇಳುತ್ತಾರೆ. ಅದನ್ನು ಹೆಮ್ಮೆಯಿಂದ ಹೇಳಿಕೊಳ್ಳಬೇಕು. ಅದನ್ನು ಈ ಪಾತ್ರ ಮಾಡುತ್ತದೆ. ಗೃಹಿಣಿಯ ಕರ್ತವ್ಯದ ಮಹತ್ವ ಏನು ಅನ್ನುವುದನ್ನು ಇದು ಎತ್ತಿ ಹಿಡಿಯುತ್ತದೆ.

◆ **ನಿಮ್ಮ ಸ್ಮರಣೀಯ ಪಾತ್ರದ ಬಗ್ಗೆ ಹೇಳಿ.**

'ಚೆಂಗುಲಾಬಿ' ಸಿನಿಮಾದಲ್ಲಿ ದೇವದಾಸಿಯ ಪಾತ್ರವನ್ನು ನಿರ್ವಹಿಸಿದ್ದೆ. ಇಷ್ಟು ವರ್ಷದ ನಟನಾ ಪಯಣದಲ್ಲಿ ತುಂಬ ಇಷ್ಟವಾದ ಪಾತ್ರ ಅದು. ಆ ಸಿನಿಮಾದ ಕಥೆ ಹೇಗೋ ಶುರುವಾಗಿ ಹೇಗೋ ಮುಗಿಯುತ್ತದೆ. ನೈಜ ಬದುಕನ್ನು ಅನಾವರಣ ಮಾಡಿದ ಕಾದಂಬರಿ ಆಧಾರಿತ ಸಿನಿಮಾ. ಯಾವತ್ತೂ ನನಗೆ ನೆನಪಿನಲ್ಲಿ ಉಳಿಯುವ ಪಾತ್ರವನ್ನು ಅದರಲ್ಲಿ ಮಾಡಿದೆ. ಅದು ತುಂಬ ಸವಾಲಿನ ಪಾತ್ರವಾಗಿತ್ತು. ಮುಂದೆ ಜೀವನ ಚರಿತ್ರೆ ಆಧಾರಿತ ಕಥೆಗೆ ಜೀವ ತುಂಬಬೇಕು ಎನ್ನುವ ಆಸೆ ಕೂಡ ಇದೆ. ಕಿರುಚಿತ್ರ, ಸಿನಿಮಾ, ಧಾರಾವಾಹಿ ಯಾವುದೇ ರೂಪದಲ್ಲಿ ಆದರೂ ಸೈ, ನಾನೊಂದು ಜೀವನ ಚರಿತ್ರೆ ಆಧಾರಿತ ಚಿತ್ರದಲ್ಲಿ ಪಾತ್ರ ನಿರ್ವಹಿಸಬೇಕು. ಅದರಲ್ಲೂ ಕ್ರೀಡಾ ಕಥೆಯಾದರೆ ಇನ್ನೂ ಚೆನ್ನಾಗಿರುತ್ತದೆ.

◆ **ಬಾಲ್ಯದಲ್ಲಿ ನಿಮ್ಮ ಕನಸು ಏನಾಗಿತ್ತು?**

ಶಾಲಾ ದಿನಗಳಲ್ಲಿ ವಿಜ್ಞಾನಿ ಆಗುವ ಕನಸು ಇತ್ತು. ಅದರಲ್ಲೂ ಬಾಹ್ಯಾಕಾಶ ಕ್ಷೇತ್ರದಲ್ಲಿ ಕೆಲಸ ಮಾಡುವ ಉತ್ಸಾಹ ಇತ್ತು. ಓದುತ್ತಾ ಬೆಳೆಯುತ್ತಾ ಅದು ಬದಲಾಯಿತು. ನಾನು ಅತ್ಯುತ್ತಮ ವಿದ್ಯಾರ್ಥಿ. ಸಾಂಸ್ಕೃತಿಕ ಕಾರ್ಯಕ್ರಮಗಳಿಗಿಂತ ಗ್ರಂಥಾಲಯಕ್ಕೆ ಹೆಚ್ಚು ಮಹತ್ವ ನೀಡುತ್ತಿದ್ದೆ. ನನಗೆ ಸ್ಪರ್ಧಾತ್ಮಕ ಪರೀಕ್ಷೆ ಬರೆದು ಆಡಳಿತಾತ್ಮಕ ಸೇವೆಗೆ ಸೇರುವ ಬಯಕೆ ಇತ್ತು. ಹಾಗಾಗಿಯೇ 'ರಾಧಾ ಕಲ್ಯಾಣ'ಕ್ಕೆ ಅವಕಾಶ ಸಿಕ್ಕಾಗ ಆರಂಭದಲ್ಲಿ ಒಪ್ಪಿರಲಿಲ್ಲ. ಅನಿವಾರ್ಯ ಕಾರಣದಿಂದ ಒಪ್ಪಬೇಕಾಯಿತು. ಅದರಿಂದ ಇದೇ ವೃತ್ತಿಯಾಯಿತು. ಈಗಲೂ ನಾನು ಓದನ್ನು ಪ್ರೀತಿಸುತ್ತೇನೆ. ಆದರೆ ಪರೀಕ್ಷೆಗೆ ಸಮಯ ಕೊಡಲು ಸಾಧ್ಯ ಆಗುವುದಿಲ್ಲ. ■